ಮೈಸೂರು ವಿಶ್ವವಿದ್ಯಾನಿಲಯ
# ಯುವರಾಜ ಕಾಲೇಜು
( ವಿಶ್ವವಿದ್ಯಾನಿಲಯದ ಸಾಮರ್ಥ್ಯವರ್ಧಿತ ಉತ್ಕೃಷ್ಟಜ್ಞಾನ ಸ್ವಾಯತ್ತತಾ ಕಾಲೇಜು)
ನ್ಯಾಕ್‌ನಿಂದ ಸಿಜಿಪಿಎ 3.34 'ಎ' ಗ್ರೇಡ್ ಮಾನ್ಯತೆ ದೊರೆತಿದೆ)
ಜೆ.ಎಲ್.ಬಿ.ರಸ್ತೆ ಮೈಸೂರು -570005, ಕರ್ನಾಟಕ ಭಾರತ

ಉಲ್ಲೇಖ: ಮೈ.ವಿ/ಯು.ಕಾ/ /2022-23 ದಿನಾಂಕ: 26.07.2022

## ಸುತ್ತೋಲೆ.

ವಿಷಯ:- **Online** ವಿಜ್ಞಾನ ಸಂಚಿಕೆ **"ಚಿಂತನ ಮಂಥನ"** ಕ್ಕೆ ಭಾರತೀಯ ವಿಜ್ಞಾನಿಗಳ ಬಗ್ಗೆ ಲೇಖನಗಳನ್ನು ಕೋರಿ.ಬಗ್ಗೆ.

****

ದಿನಾಂಕ 25.07.2022 ರಂದು ನಡೆದ Science Forum ನ ಸಭೆಯಲ್ಲಿ Online Science Magazine **"ಚಿಂತನ ಮಂಥನ"** ವನ್ನು ಆಗಸ್ಟ್-2022 ರಿಂದ ಪ್ರಕಟಣೆ ಮಾಡುವುದಾಗಿ ತೀರ್ಮಾನಿಸಲಾಯಿತು. ಈ ಸಂಚಿಕೆಯ ಯಶಸ್ವಿಗೆ ತಮ್ಮೆಲ್ಲರ ಸಹಕಾರವನ್ನು ಈ ಮೂಲಕ ಕೋರಲಾಗಿದೆ. ಮೊದಲನೆಯ ಸಂಚಿಕೆಯನ್ನು ಆಗಸ್ಟ್-15 ರಂದು ಬಿಡುಗಡೆ ಮಾಡಲಾಗುವುದು. ಈ ಸಂಚಿಕೆಯು ಭಾರತೀಯ ವಿಜ್ಞಾನಿಗಳ ಕೊಡುಗೆಗಳಿಗಾಗಿ ಮೀಸಲಾಗಿರುತ್ತದೆ. ಈ ಸಂಬಂಧ ನಮ್ಮ ಕಾಲೇಜಿನ ವಿಜ್ಞಾನ ಸಂಚಿಕೆ **"ಚಿಂತನ ಮಂಥನ"** ಕ್ಕೆ ಕನಿಷ್ಟ 75 ಭಾರತೀಯ ವಿಜ್ಞಾನಿಗಳ ಬಗ್ಗೆ ಯುವರಾಜ ಕಾಲೇಜಿನ ಎಲ್ಲಾ ವಿಭಾಗದ ವಿದ್ಯಾರ್ಥಿಗಳು/ಅಧ್ಯಾಪಕರು/ಸಹಾಯಕ ಪ್ರಾಧ್ಯಾಪಕರು/ಅತಿಥಿ ಉಪನ್ಯಾಸಕರು/ಸಂಶೋಧನಾ ವಿದ್ಯಾರ್ಥಿಗಳಿಂದ ಲೇಖನಗಳನ್ನು ಆಹ್ವಾನಿಸಲಾಗಿದೆ. ಈ ಬಗ್ಗೆ ಬರೆಯಲು ಇಚ್ಛಿಸುವವರು ಒಂದರಿಂದ ಮೂರು ಪುಟಗಳಿಗೆ ಮೀರದಂತೆ (ಒಬ್ಬರು ಅಥವಾ ಇಬ್ಬರು ವಿಜ್ಞಾನಿಗಳ ಬಗ್ಗೆ) ಬರೆದು ಕಳುಹಿಸಲು ಕೋರಲಾಗಿದೆ.

ಕನ್ನಡ ಅಥವಾ ಇಂಗ್ಲೀಷ್‌ನಲ್ಲಿ type ಮಾಡಿದ Soft copy ಯನ್ನು ಇ-ಮೇಲ್ ಐಡಿ : scienceform.ycm@gmail.com ಗೆ ವರ್ಡ್ ಮತ್ತು ಪಿಡಿಎಫ್ ಫಾರ್ಮ್ಯಾಟ್ (Normal page layout, 12 font size) ನಲ್ಲಿ ದಿನಾಂಕ:10.08.2022 ರ ಒಳಗಾಗಿ ಕಳುಹಿಸಿ ಕೊಡಬೇಕಾಗಿ ಈ ಮೂಲಕ ತಿಳಿಸಲಾಗಿದೆ. ಬಂದ ಲೇಖನಗಳ ಆಯ್ಕೆಯ ಅಂತಿಮ ತೀರ್ಮಾನ ಸಂಪಾದಕೀಯ ಮಂಡಳಿಯದ್ದಾಗಿರುತ್ತದೆ.

ಬರವಣಿಗೆಯ ಕ್ರಮ: ವಿಜ್ಞಾನಿಯು ಜೀವಿಸಿದ ಕಾಲ, ವಿದ್ಯಾಭ್ಯಾಸ, ಕೆಲಸ ಮಾಡಿದ ಸಂಸ್ಥೆಗಳು /ಅಲಂಕರಿಸಿದ ಹುದ್ದೆಗಳು, ವಿಜ್ಞಾನಿಯ ಕೊಡುಗೆಗಳು, ಅವರು ಪಡೆದ ಪುರಸ್ಕಾರಗಳು, ಅವರ ಹೆಸರಿನಲ್ಲಿರುವ ಸ್ಮಾರಕಗಳು(ಇದ್ದರೆ) ಇತ್ಯಾದಿ ವಿಚಾರಗಳನ್ನೊಳಗೊಂಡಿರಬೇಕು.

ಪ್ರಾಂಶುಪಾಲರು 1-8-22

ಪ್ರಾಂಶುಪಾಲರು
ಯುವರಾಜ ಕಾಲೇಜು (ಸ್ವಾಯತ್ತ)
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು-570 005

ಪ್ರತಿಗಳು:

1. ಆಡಳಿತಾಧಿಕಾರಿಗಳು, ಯುವರಾಜ ಕಾಲೇಜು, ಮೈಸೂರು.
2. ಪರೀಕ್ಷಾ ನಿಯಂತ್ರಣಾಧಿಕಾರಿಗಳು, ಯುವರಾಜ ಕಾಲೇಜು, ಮೈಸೂರು.
3. ಎಲ್ಲಾ ವಿಭಾಗದ ಮುಖ್ಯಸ್ಥರುಗಳು ತಮ್ಮ ವಿಭಾಗದ ವಿದ್ಯಾರ್ಥಿಗಳು/ಅಧ್ಯಾಪಕರು/ಸಂಶೋಧನಾ ವಿದ್ಯಾರ್ಥಿಗಳ ಗಮನಕ್ಕೆ ತರಬೇಕಾಗಿ ತಿಳಿಸಲಾಗಿದೆ.
4. ಕಛೇರಿ ಅಧೀಕ್ಷಕರು ಸಾಮಾನ್ಯ/ಲೆಕ್ಕ, ಯುವರಾಜ ಕಾಲೇಜು, ಮೈಸೂರು.
5. ಕಛೇರಿ ಪ್ರತಿ.